ಉಳಿದಿರತಕ್ಕಂತಹ ಹಳ್ಳಿಗಳಿಗೆ ಸಂಪರ್ಕಗಳು ಇವತ್ತು ಕಡಿದುಹೋಗಿವೆ, ರಸ್ತೆ ಹಾಗೂ ಸೇತುವೆ ಮಾಡಿಕೊಡಿ ಎಂದು ಹೈಪವರ್ ಕಮಿಟಿಯಲ್ಲಿ ಕುಳಿತುಕೊಂಡು ಇವತ್ತು ಮಾತನಾಡುತ್ತೇವೆ. ಇದರ ಬಗ್ಗೆ ನಿರ್ಣಯಗಳು ಆಗುತ್ತವೆ. ಅದು ಕಾರ್ಯಗತವಾಗುವುದಿಲ್ಲ. ಇದರ ಬಗ್ಗೆ ನನ್ನ ವಿಶೇಷವಾದ ವಿನಂತಿ ಇದೆ, ಇವತ್ತು ಇಲ್ಲಿಯೂ ಕೂಡ ನಮ್ಮ ವರಾಹಿ ಬಗ್ಗೆ ಮಾನ್ಯ ಮಂತ್ರಿಗಳು ಹೈಪವರ್ ಕಮಿಟಿಯನ್ನು ರಚನೆ ಮಾಡಲಿಲ್ಲ. ಸ್ವಲ್ಪ ಸಮಸ್ಯೆಗಳು ಬಾಕಿ ಉಳಿದಿವೆ.

ಶ್ರೀ ಡಿ.ಎನ್. ಜೀವರಾಜ್:– ಮಾನ್ಯ ಅಧ್ಯಕ್ಷರೆ, ವರಾಹಿ ಹೈಪವರ್ ಕಮಿಟಿಯ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಗಾಜನೂರು ಡ್ಯಾಂಗೆ ಗೇಟ್‌ನ್ನು ಇಳಿಸುತ್ತಾರೆ ಆ ಗಾಜನೂರು ಡ್ಯಾಂಗೆ ಗೇಟ್‌ನ್ನು ಹಾಕಿದರೆ ಈ ಕಡೆಯವರು ಏನಾಗುತ್ತಾರೆಂದು ಗೊತ್ತಿಲ್ಲ. ಅದರ ಬಗ್ಗೆ ಹೈಪವರ್ ಕಮಿಟಿಯಲ್ಲಿ ಒಂದು ಮೀಟಿಂಗ್ ಕೂಡ ಆಗಲಿಲ್ಲ. ನಾನು ಆ ಕ್ಷೇತ್ರದ ಎಂಎಲ್‌ಎ ಆಗಿದ್ದೇನೆ, ನನ್ನನ್ನೂ ಬಿಟ್ಟು ಅವರು ಮೀಟಿಂಗ್ ಮಾಡುತ್ತಿದ್ದಾರೋ ಏನೋ ಗೊತ್ತಿಲ್ಲ ಅದರ ಬಗ್ಗೆ ನಾನು ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಆರಗ ಜ್ಞಾನೇಂದ್ರ: ನಾವು ಅದಕ್ಕೋಸ್ಕರ ತ್ಯಾಗ ಮಾಡಿರುವಂತಹವರ ಬದುಕಿನ ಬಗ್ಗೆ ಆಲೋಚನೆಯನ್ನು ಮಾಡಿ ದಯವಿಟ್ಟು ಇದನ್ನು ಕೊಡಿ. ಆ ಎಂಡಿಗಳಿಗೆ ಅವರೆಲ್ಲಾ ಅಧಿಕಾರಿಗಳನ್ನು ಕರೆದುಕೊಂಡು ನೀವೇ ಒಂದು ದಿವಸ ಬಂದು ಅಲ್ಲಿ ಮೀಟಿಂಗ್ ಮಾಡಿ, ನಮ್ಮ ಚುನಾಯಿತ ಪ್ರತಿನಿಧಿಗಳನ್ನು ಕರೆಯಿರಿ. ಈಗ 10 ವರ್ಷ 20 ವರ್ಷಗಳಾಯಿತು. ಭೂಮಿ ಮನೆ ಕಳೆದುಕೊಂಡರೂ ಇವತ್ತಿಗೂ ಕೂಡ ಪರಿಹಾರ ಸಿಗುವುದಿಲ್ಲ, ಎಂದರೆ ಇದಕ್ಕೆ ಅರ್ಥವಿಲ್ಲ. ಇನ್ನೂ ಮುಂದೆ ಹೈಡಲಿ ಪ್ರಾಜೆಕ್ಟ್ ಮಾಡುವುದಕ್ಕೆ ಹೋದರೆ ಯಾರೂ ಬಿಡುವುದಿಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ನಿಮ್ಮ ಕಾಲದಲ್ಲಿಯಾದರೂ ಈ ಕೆಲಸವನ್ನು ತಾವು ಮಾಡಬೇಕೆಂದು ಕೇಳುತ್ತೇನೆ. ರಾಜ್ಯದ ವಿದ್ಯುತ್ತಿನ ಬಗ್ಗೆ ಮತ್ತು ಇಂಧನದ ಬಗ್ಗೆ ವಿಶೇಷವಾಗಿರತಕ್ಕಂತಹ ಗಮನ ಕೊಡಬೇಕು. ನಿಮ್ಮ ಕಾಲದಲ್ಲಿ ಸ್ವಲ್ಪ ಹಾಗೂ ಹೀಗೂ ಹಣಕಾಸು ಓಡಾಡುತ್ತಿದೆ. ಈಗ ಸ್ವಲ್ಪ ಪರವಾಗಿಲ್ಲ ಅನ್ನಿಸುತ್ತದೆ. ಆದರೆ ಇದು ಸಾಕಾಗುತ್ತಿಲ್ಲ. ಇನ್ನು ಕೂಡ ಇದನ್ನು ಸ್ಪೀಡ್‌ಅಪ್ ಮಾಡುವಂತಹ ಅವಶ್ಯಕತೆ ಇದೆ; ಎನ್ನುವಂತಹ ಮಾತನ್ನು ಹೇಳುತ್ತಾ ಅಧ್ಯಕ್ಷರೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ಅ) ಶಿಕಾರಿಪುರ ತಾಲ್ಲೂಕಿನ ಅಂಬಳಿಹುಳ ಜಲಾಶಯ ತುಂಬಿ ಕೆಲವು ಹಳ್ಳಿಗಳು ಮುಳುಗಿ ಹೋಗಿರುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಎಂ.ಪಿ. ಪ್ರಕಾಶ್‌ರವರೆ, ತಾವು ಈ ಕಡೆ ಗಮನಿಸಬೇಕು. ಈಗತಾನೇ ಒಂದು ಗಂಟೆಯಿಂದ ಸುದ್ದಿ ಬರುತ್ತಿದೆ. ಶಿಕಾರಿಪುರ ತಾಲ್ಲೂಕಿನಲ್ಲಿ ಅಂಬಳಿಹುಳ ಜಲಾಶಯ ಇದೆ, ಈ ಪುಣ್ಯಾತ್ಮ ಇರಿಗೇಷನ್ ಸೆಕ್ರೆಟರಿಗೆ ಈಗ ಸುಮಾರು 15–20 ದಿವಸಗಳು ಒಂದು ತಿಂಗಳಿಂದ ಈಚೆಗೆ ಸ್ಪಾಟ್ ತೋರಿಸಿಕೊಂಡು ಬಂದಿದ್ದೇನೆ. ನಾನು ಅಧಿಕಾರಿಗಳ ಹತ್ತಿರ ಎಲ್ಲವನ್ನೂ ಹೇಳಿಕೊಂಡೆ. ಅದನ್ನು ಇಂಪ್ರೂವ್‌ಮೆಂಟ್‌ನ್ನು ಮಾಡಿಕೊಂಡ ಮೇಲೆ ಸರಿಯಾದ ರೀತಿಯಲ್ಲಿ ಅಲ್ಲಿಯ ತಗ್ಗು ಉಬ್ಬುಗಳನ್ನು ಮುಚ್ಚಲಿಲ್ಲ. ಇದರ ಪರಿಣಾಮವಾಗಿ ಜಲಾಶಯವು ತುಂಬುತ್ತಿದೆ, ಅಂಬಳಿಹುಳ

ರಿಸರ್ವ್‌ವಾಯರ್‌ನಲ್ಲಿ ರೈಟ್ ಸೈಡ್ಸ್ ಸ್ಲೂಯಿಸ್‌ಘೂರ್ತಿ ಕಿತ್ತುಕೊಂಡು ಹೋಗುತ್ತಿದೆ. ಇನ್ನು 1 ಗಂಟೆ ಅಥವಾ 2 ಗಂಟೆಯಲ್ಲಿ ಕೆಲವು ಹಳ್ಳಿಗಳು ಮುಳುಗಿಹೋಗುವಂತಹ ಸಂಭವ ಇದೆ. ನಾನು ಇರಿಗೇಷನ್ ಸೆಕ್ರೆಟರಿಯವರಿಗೂ ಫೋನ್‌ನಲ್ಲಿ ಮಾತನಾಡಿದ್ದೇನೆ. ಎಲ್ಲಾ ಅಧಿಕಾರಿಗಳಿಗೂ ಕೂಡ ಇದರ ಬಗ್ಗೆ ತಿಳಿಸಿದ್ದೇನೆ. ಅಲ್ಲಿ ಸುತ್ತಮುತ್ತಲಿರುವ ಅಧಿಕಾರಿಗಳು ಹೋಗಿ ಅಲ್ಲಿ ಮರಳಿನ ಚೀಲಗಳನ್ನು ಹಾಕಿ ಅದರ ಬಗ್ಗೆ ಗಮನಕೊಟ್ಟರೆ ಆ ಜಲಾಶಯವು ಉಳಿಯುತ್ತದೆ. ಇಲ್ಲದೆ ಇದ್ದರೆ ಕಂಪ್ಲೀಟ್ ಆಗಿ ಅಲ್ಲಿ ಹತ್ತಾರು ಸಾವಿರ ಎಕರೆ ನೀರಾವರಿ ಮಾಡುವಂತಹ ಭೂಮಿ ಮತ್ತು ಹಳ್ಳಿಗಳು ಮುಳುಗಿಹೋಗುತ್ತವೆ. ಜನರು ಸಂಕಷ್ಟದಲ್ಲಿ ಸಿಲುಕುವಂತಹ ಪರಿಸ್ಥಿತಿ ಬರುತ್ತದೆ. ಈಗತಾನೇ ಸುದ್ದಿ ಬಂತು. ಅದಕ್ಕೋಸ್ಕರ ತಾವು ತಕ್ಷಣ ಸಂಬಂಧಪಟ್ಟವರಿಗೆ ತಿಳಿಸಿ, ನಾನು ಈ ಬಗ್ಗೆ ಪ್ರಸ್ತಾಪ ಮಾಡಲಿಲ್ಲವೆಂದು ಆಗಬಾರದು. ನಾನು ಫೋನ್‌ನಲ್ಲಿ ಮಾತನಾಡಿದ್ದು ಆಗುವುದಲ್ಲ, ಇದು ದಾಖಲೆಯಲ್ಲಿ ಇರಬೇಕು. ನೀವು ತಕ್ಷಣ ಅವರಿಗೆ ಸೂಚನೆಯನ್ನು ಕೊಟ್ಟು ಅಲ್ಲಿ ಯಾವ ಸ್ಥಿತಿ ಇದೆ ಏನು ಅದನ್ನು ತಡೆಯಬಹುದಾ, ಎಂಬ ಬಗ್ಗೆ ಕ್ರಮ ಕೈಗೊಳ್ಳಬೇಕು ಜಮೀನು ನೀರಾವರಿ ಆಗುವುದು ತಪ್ಪಿ ಹತ್ತಾರು ಹಳ್ಳಿಗಳು ಮುಳುಗುವ ಸಂಭವ ಇರುವುದರಿಂದ ಪ್ರತಿ ಕ್ಷಣ ಆತಂಕದ ವಿಚಾರ ಇರುವುದರಿಂದ ದಯಮಾಡಿ ಈ ಬಗ್ಗೆ ಸೂಚನೆಯನ್ನು ತಕ್ಷಣ ಕೊಡಬೇಕು. ಅಂಜನಾಪುರ, ರೈಟ್‌ಸೈಡ್ಸ್ ಸ್ಲೂಯಿಸ್ ಪೂರ್ತಿ ಕಿತ್ತು ಹೋಗುತ್ತಿದೆ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ತೀವ್ರವಾದ ಸಮಸ್ಯೆಯನ್ನು ಹೇಳಿದ್ದಾರೆ. ನಾನು ಈ ಕೂಡಲೇ ಇರಿಗೇಷನ್ ಸೆಕ್ರೆಟರಿಯವರಿಗೆ ಹಾಗೂ ಚೀಫ್ ಇಂಜಿನಿಯರ್‌ರವರಿಗೆ ಮಾತನಾಡಿ ತತಕ್ಷಣದಲ್ಲಿ ಕ್ರಮವನ್ನು ತೆಗೆದುಕೊಳ್ಳಲಾಗುವುದು, ಮತ್ತು ನೀರನ್ನು ಉಳಿಸಿ, ಜಲಾಶಯದ ನೀರಿನಿಂದ ಮುಳುಗಿ ಹೋಗುವಂತಹ ಹಳ್ಳಿಗಳನ್ನ ಉಳಿಸುವಂತಹ ಕ್ರಮ ತೆಗೆದುಕೊಳ್ಳುತ್ತೇನೆ.

ಆ) ತಿಪಟೂರಿನ ಈಚನೂರು ಕೆರೆಗೆ ನೀರು ತುಂಬಿಸಿ ಕುಡಿಯುವ ನೀರಿಗೆ ವ್ಯವಸ್ಥೆ ಮಾಡುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅನುಮತಿಯನ್ನು ತೆಗೆದುಕೊಂಡಿದ್ದೇನೆ. ಇಲ್ಲಿ ತಮಗೆ ಗೊತ್ತಿರುವಹಾಗೆ ಹೇಮಾವತಿ ನೀರನ್ನು ತಿಪಟೂರಿನ ಈಚನೂರು ಕೆರೆಗೆ ಬಿಟ್ಟು ಅದು ತುಂಬಿದರೆ ಕುಡಿಯುವ ನೀರಿಗೆ ಅನುಕೂಲವಾಗುತ್ತದೆ. ಈಗ ಹೇಮಾವತಿಯು ತುಂಬುತ್ತಿದೆ. ನಿನ್ನೆ ನಾನು ತಮ್ಮ ಹತ್ತಿರ ಮಾತನಾಡುವುದಕ್ಕೆ ಪ್ರಯತ್ನ ಮಾಡಿದೆ. ತಾವು ಈ ಸದನದಲ್ಲಿ ಭರವಸೆಯನ್ನು ಕೊಟ್ಟು ವಾರದಿಂದ ಮಾಡುತ್ತಿರುವ ಸತ್ಯಾಗ್ರಹ ನಿಲ್ಲಿಸುವಂತೆ ಹೇಳಬೇಕು. ಈಚನೂರು ಕೆರೆಗೆ ನೀರನ್ನು ತುಂಬಿಸಿ ಅದನ್ನು ಉಳಿಯುವಂತೆ ಹಾಗೂ ಕುಡಿಯುವ ನೀರಿಗೆ ವ್ಯವಸ್ಥೆಯನ್ನು ಮಾಡುವಂತಹ ಭರವಸೆಯನ್ನು ಕೊಟ್ಟರೆ ಅನುಕೂಲವಾಗುತ್ತದೆ, ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಇಂಧನ ಹಾಗೂ ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೆ, ನಿನ್ನೆ ರಾತ್ರಿ ನಾನು ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ನಾಳೆ ಬೆಳಿಗ್ಗೆಯಿಂದ ನೀರು ಬಿಡುವುದಕ್ಕೆ ವ್ಯವಸ್ಥೆ ಮಾಡಿದ್ದೇನೆ. ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರ ಜೊತೆ ನೀರು ಬಿಡಿಸುವ ಬಗ್ಗೆ ಮಾತನಾಡಿದ್ದೇನೆ. ನಾಳೆ ಬೆಳಿಗ್ಗೆಯಿಂದಲೇ ನೀರನ್ನು ಬಿಡುತ್ತೇವೆ.